ಕನ್ನಡನಾಡಿನ ಮಹಾಪುರುಷರು ಬಬ್ಬೊಬ್ಬರಾಗಿ ಕಣ್‌ಮರೆಯಾದುದನ್ನು ಅತ್ತಿಮಬ್ಬೆ ಕಣ್ಣಾರೆ ಕಾಣಬೇಕಾಯಿತು. ಅಂಥ ವೇಳೆಯಲ್ಲಿ ಇದನ್ನು ಕಾಣಲೆಂದೇ ಕಣ್ಣನ್ನು ಉಳಿಸಿದೆಯೇನೋ ತಂದೆ ಎಂದು ಈಕೆ ಕಂಬನಿಮಿಡಿಯುತ್ತಿದ್ದಳು. ಕೆಲವೊಮ್ಮೆ ದೂರದ ಊರಿಂದ ಆಪ್ತರು ಸತ್ತ ಸುದ್ದಿ ಬರುತ್ತಿತ್ತು .ಕಿವಿಗಳಿರುವುದೂ ಅಪಾಯವೇನೋ ಎಂದುಕೊಂಡು ಅತ್ತಿಮಬ್ಬೆ ಮಮ್ಮಲಂ ಮರುಗಬೇಕಾಯಿತು. ಈಕೆಯ ತಂದೆ ಮಲ್ಲಪ ಮುಪ್ಪಡರಿ ಲಕ್ಕುಂಡಿಯಲ್ಲೇ ಬಂದು ಸತ್ತನು. ಮುತ್ತೈದೆಯಾಗಿದ್ದ ಅಬ್ಬಕಬ್ಬೆ ಗಂಡನ ಜೊತೆಯಾಗಿ ಚಿತೆಯೇರಿದಳು.!

“ಅಪ್ಪಾಜಿ, ನೀವು ದೇವರಂಥ ಮನುಷ್ಯರು. ಎಲೆಮರೆಯ ಕಾಯಾಗಿ ಬಾಳಿದಿರಿ, ನಾನು ಮಾಡುವುದಕ್ಕಿಂತ ಹತ್ತುಪಾಲು ಲೋಕಸೇವೆ ಮಾಡಿದಿರಿ, ಈ ಕೈಕೊಟ್ಟುದನ್ನು ಆ ಕೈ ಕಾಣದಂತೆ ಎಚ್ಚರವಾಗಿದ್ದಿರಲ್ಲ ! ಅಮ್ಮಾಜಿ, ನಿವು ನನ್ನಂಥ ಎಂಟುಜನ ದಾನಚಿಂತಾಮಣಿಗಳನ್ನು ಹಡೆದ ಭಾಗ್ಯವಂತೆ ! ಕೀರ್ತಿಶನಿಗೆ ಬಲಿಬೀಳದೆ ಇದ್ದಬದ್ದ ಹಣವನ್ನೆಲ್ಲ ನನ್ನ ಮಡಿಲಲ್ಲಿ ಹಾಕಿದಿರಿ !ನನ್ನಿಂದ ದಾನಧರ್ಮ ಮಾಡಿಸಿದಿರಿ ! ನೀವು ಕೊಟ್ಟ ಧನರಾಶಿಯನ್ನು ನಾನು ದೂಪಿಟ್ಟು ಲೋಕವಿಖ್ಯಾತೆಯಾದೆ ! ನೀವಾದರೋ ಯಾವುದರಲ್ಲೂ ಅತಿಯಾಗದೆ ಗಂಡಮಕ್ಕಳಿಗೆ ಅಂಜಿ ಬಾಳಿದಿರಿ ! ಭರತಖಂಡ ಮಹಿಳಾ ಸಂಕುಲಕ್ಕೆ ಮಾದರಿಯಾಗಿ ಕಣ್‌ಮುಚ್ಚಿವಿದಿರಿ !ಧನರಾಶಿಯನ್ನೆಲ್ಲ ಮಕ್ಕಳಿಗೆ ಧಾರಾಳವಾಗಿ ಕೊಟ್ಟಿರಿ. ಅಷ್ಟೇ ಅಲ್ಲ ಬರಬಹುದಾಗಿದ್ದ ಕೀರ್ತಿಯನ್ನೂ ಮಕ್ಕಳಲ್ಲಿ ಹಂಚಿಹೋದಿರಲ್ಲ ! ನಾನು ಒಂದುಕಡೆ ದಾನಚಿಂತಾಮಣಿಯೆಂದೂ ಇನ್ನೊಂದು ಕಡೆ ಸಮ್ಯಸ್ಕ್ವಚೂಡಾಣಿಯೆಂದೂ ಬರೆಸಿಕೊಂಡು ಶಿಲಾಶಾಸನ ಹಾಕಿಸಿಕೊಂಡು ಮೆರೆದಾಡಿದೆನು ! ನೀವು ಎಲ್ಲೂ ಬರೆಸದೆ ನೋಂಪಿಗಳಾನ್ನಾಚರಿಸಿದಿರಿ !ಎಲ್ಲೂ ಬರೆಸದೆ ಕೊಡುಗೈದಾನಿಯಾಗಿ ಹಣವನ್ನು ನಮ್ಮ ಕೈಗೆ ಕೊಟ್ಟು ಅನಂತರ ಎಲ್ಲೆಲ್ಲಿಗೆ ಬೇಕೋ ಅಲ್ಲಲ್ಲಿಗೆ ನಮ್ಮಿಂದಲೇ ಕೊಡಿರಿಸಿದಿರಿ. ನಾವೆಲ್ಲ ಕೀರ್ತಿಗಾಗಿ ಬಾಳಿದ ಅಶನಿಗಳು !” ಎಂದು ಅತ್ತಿಮಬ್ಬೆ ಕೆಲವು ದಿನ ಹೆತ್ತವರಿಗಾಗಿ ಕಂಬನಿಯ ಕಾಣಿಕೆಯನ್ನು ಸುರಿಸಿದಳು.

ಮಾತಾಪಿತರನ್ನು ಕಳೆದುಕೊಂಡು ಅತ್ತಿಮಬ್ಬೆ ಅಳುತ್ತಿರುವಾಗಲೆ ಪಂಪಕವಿಯ ಸಾವಿನ ಸುದ್ದಿ ಬರಸಿಡಿಲಾಗಿ ಬಂದೆರಗಿತು. "ಕವಿತಾಗುಣಾರ್ಣವ, ಕಣ್ಮುಚ್ಚಿವಿದೆಯೇನೋ ತಂದೆ ! ನಾಡೋಜ, ಕನ್ನಡನಾಡಿಗೆ ಇನ್ನು ಓಜನಿಲ್ಲದಾಯಿತಲ್ಲೋ ! ರತ್ನತ್ರಯವನ್ನೂ ಸಾಧಿಸಿರುವೆನೆಂದು ಲೋಕಕ್ಕೆ ಸಾರುವಂತೆ ನೀನು ಮೂವರು ಪ್ರಿಯತಮೆಯರನ್ನು ಪಡೆದಿದ್ದೆಯೇನಪ್ಪ ! ಆಂಧ್ರ ನೀರಂಧ್ರ ಬಂಧುರ ಸ್ತನಹಾರ ರತ್ನಂ ! ಕೇರಳ ವಧೂಕಟೀ ಸೂತ್ರಾರುಣ ಮಣಿ ! ಕನ್ನಡಕನ್ನೆಯ ಕಣ್ಮಣಿ ಇನ್ನಿಲ್ಲವಾದೆಯೋ ?" ಎಂದು ಗೋಳಾಡಿದಳು. ನೆಲದಮೇಲೆ ತೊಟ್ಟಿಕ್ಕಿದ ಈಕೆಯ ಕಂಬನಿ ತಮಗೆ ತಾವೇ ಜೋಡಿಯಾಗಿ 'ಪಂಪ' ಎಂದು ಚಿತ್ರಿಸಬೇಕೆ ? ಕಂಬನಿಯಲ್ಲಿ ಬರೆದ ಪಂಪನನ್ನು ನೋಡಿ ಈಕೆಯ ಸಂಕಟ ಇನ್ನೂ ಹೆಚ್ಚಾಯಿತು.

"ಪಂಪ ಮಾವಾಜಿ, ನಿನ್ನನ್ನು ಹಿಂದುಮುಂದು ಮಾಡಿದರೂ ನೀನು ನೀನೇ ಆಗಿನಿಲ್ಲುವೆಯಲ್ಲ. ಇಂಥ ಯೋಗ್ಯತೆ ನಮ್ಮ ನಾಡಿನಲ್ಲಿ ಮತ್ತಾರಿಗುಂಟು ?" ಎಂದು ಗೋಳಾಡಿದಳು.

ಪಂಪನಿಗಾಗಿ ಈಕೆ ಅಳುತ್ತಿರುವಾಗಲೇ ಒಂದೆರಡುವಾರ ಕಳೆದಮೇಲೆ ದಲ್ಲಪನನ್ನು ಜವರಾಯ ಬಾಚಿದನು.ಅದೂ ಲಕ್ಕುಂಡಿಯಲ್ಲೇ ! ಅತ್ತಿಮಬ್ಬೆ ಮಾವನ ಹೆಣವನ್ನು ತಬ್ಬಿಕೊಂಡು ಹಸುಗೂಸಾಗಿ ಅತ್ತಳು. ಅತ್ತೆಯನ್ನು ಕುರಿತು "ಅತ್ತೆ ,ನನಗಾಗಿ ತಾವು ಸಹಗಮನ ಮಾಡಕೂಡದು, ನೀವಿಲ್ಲದೆ ಅರೆಘಳಿಗೆಯೂ ನಾನಿರಲಾರೆ" ಎಂದು ಎದೆಬಿರಿಯುವಂತೆ ಅಬ್ಬರಿಸಿದಳು. ಸಂಪ್ರದಾಯ ಶರಣರು ಕೇಳಾರೆ ?ದಲ್ಲಪನ ಚಿತೆಯಮೇಲೆ ಪದ್ಮಬ್ಬೆ ನಗುನಗುತ್ತ ಮಲಗಿದಳು. ಅತ್ತಿಮಬ್ಬೆ ತನ್ನ ಅತ್ತ ಜೀವಸಹಿತ ದಹಿಸಿಹೋಗುವುದನ್ನು ಕಣ್ಣಾರೆ ಕಾಣಬೇಕಾಯಿತು. !

"ಒಂದು ದಿನವಾದರೂ ನನ್ನ ಆಕಾಂಕ್ಷೆಗೆ ಅತ್ತೆಮಾವ ಇಬ್ಬರೂ ಅಡ್ಡಿಯಾಗಲಿಲ್ಲವಲ್ಲ. ಗಂಡಸತ್ತವಳು. ಅವಳ ಮನಸ್ಸು ನೋಯಿಸಬಾರದು ಎಂದುಕೊಂಡು ಅವರಿಬ್ಬರೂ ನಾನು ಮನೆಯನ್ನೇ ಮುಳುಗಿಸುವಂತೆ ದೂಪಿಟಾಗಲೂ ಚಕಾರ ಎತ್ತಿದವರಲ್ಲಮ್ಮ !" ಎಂದು ತನ್ನ ಸೊಸೆಯರಿಗೆ ಹೇಳಿ ಅತ್ತಮಬ್ಬೆ ಅಕ್ರಂದನವೆಸಗಿದಳು. ಈ ಸಂದರ್ಭದಲ್ಲೇ ಪೊನ್ನಕವಿಯ ಹಾಗು ಅಜಿತಸೇನಾಚಾರ್ಯರ ಸಾವಿನ ಸುದ್ದಿ ಬಂದು ಈಕೆಗೆ ಮುಟ್ಟಿತು.

"ದೇವ ,ಲೋಕವೆಲ್ಲ ಸತ್ತು ಸುಣ್ಣವಾಗುತ್ತಿರುವುದನ್ನು ಕಣ್‌ತುಂಬ ಕಾಣಬೇಕೆಂದು ನನಗೆ ಆಯಸ್ಸನ್ನು ಕೊಟ್ಟೆಯಾ" ಎಂದು ಈಕೆ ಅರಿಚಿದಳು. ಕಂಬನಿ ಇರುವ ತನಕ ಅತ್ತಳು. !ಒಂದೆರಡು ತಿಂಗಳು ಕಳೆಯುತ್ತಿರುವಾಗಲೆ ಕಾಳಾಲಾದೇವಿಯ ಮರಣ ವಾರ್ತೆ ಬಂದು ಮುಟ್ಟಿತು.

"ಕಾಳತ್ತೆ, ನೀನು ನಿಗರ್ವಿಯಮ್ಮ !ಕರುಬುತನವೆಂಬುದು ನಿನ್ನ ಹೆಸರು ಹೇಳಿದವರ ಬಳಿಯೂ ಸುಳಿಯಲಾರದು. ಭೂಮಿ ಆಗಸ ಎರಡೂ ಏಣಿ ಹಾಕುವಂತೆ ಗೊಮ್ಮಟ ಮಹಾಮೂರ್ತಿಯನ್ನು ನಿಲ್ಲಿಸಿಬಿಟ್ಟಿರುವೆಯಲ್ಲ ! ಅತ್ತೆ, ನಾನು ಭಾವಗೀತೆ ನೀನಾದರೋ ಮಹಾಕಾವ್ಯ !ಮಹತ್ತರವದುದೆಲ್ಲ ಒಂದಾದ ಮೇಲೋಂದರಂತೆ ಕನ್ನಡ ನಾಡನ್ನು ನಡುನೀರಿನಲ್ಲಿ ಕೈಬಿಟ್ಟು ಹೋಗುತ್ತಿವೆಯಲ್ಲ !ಮಲ್ಲಪ, ಅಬ್ಬಕಬ್ಬೆ ಹೋದರು ! ಪಂಪ ಮಹಾಕವಿ ಹೋದರು !ದಲ್ಲಪ ಮತ್ತು ಪದ್ಮಬ್ಬೆ ಇಲ್ಲವಾದರು. ಕುರುಳ್ಗಳ ಸವಣ ಪೊನ್ನಮಹಾಕವಿ, ಶಿಕ್ಷಣಾಚಾರ್ಯ ಅಜಿತಸೇನರು ನಮ್ಮನ್ನು ತೊರೆದರು ! ಮಹಾಕಾಯದ ಕಯೋತ್ಸರ್ಗ ಮೂರ್ತಿಯನ್ನು ಕಡೆಸಿ ಕೀರ್ತಿಕಾಯಳಾದ ಕಾಳಲಮಾತೆ ನಮಗೆಲ್ಲ ಕೈಕೊಟ್ಟು ಹೋದಳು ! ಇನ್ನೂ ಎಷ್ಟು ಜನ ಮಹಿಮಾವಂತರ ಸಾವನ್ನು ನಾನು ಕಾಣಬೇಕಾಗಿದೆಯೋ, ಕೇಳಬೇಕಾಗಿದೆಯೋ." ಎಂದು ಅತ್ತಿಮಬ್ಬೆ ಗೋಳಾಡಿದಳು.

ಅತ್ತಿಮಬ್ಬೆ ಬೆಳಿಗ್ಗೆ ಹಾಸಿಗೆಯಿಂದ ಏಳುವಾಗಲೆ ಅಂಜುತ್ತ ಏಳುತ್ತಿದ್ದಳು. ಇಂದು ಮತ್ತಾರು ಸಾಯುವರೋ ಎಂಬ ಹೆದರಿಕೆಯಿಂದಲೇ ಮಲಗುತ್ತಿದ್ದಳು. ಹೀಗಿರುವಾಗ ಚಾಮುಂಡರಾಯನ ಸಾವಿನ ಸುದ್ದಿಯನ್ನು ಒಂದು ದಿನ ಪ್ರಾತಃಕಾಲ ಈಕೆ ಕೇಳಬೇಕಾಯಿತು ! "ಮಾವಾಜಿ, ನನ್ನ ಮೇಲೆ ನಿಮಗೆ ಎಷ್ಟೊಂದು ಪ್ರೀತಿ ಇತ್ತಪ್ಪ. ನನಗೂ ಗುಂಡಗೂ ನಿಲುವಾಭರಣವನ್ನು ಉಡುಗೊರೆಯಾಗಿ ಕೊಟ್ಟೆಯಲ್ಲ ! ನಮ್ಮಿಬ್ಬರನ್ನೂ ಮನೆದುಬಿಸಿಕೊಳ್ಳುವೆ ಆಸೆಯಿಂದ ಬಂದು ಬರಿಗೈಯಲ್ಲಿ ಹೋಗುವಾಲು ಸಮಚಿತ್ತವನ್ನು ಉಳಿಸಿಕೊಂಡು ನಿಲುವಾಭರಣ ನಮ್ಮಿಬ್ಬರಿಗೂ ಹೇರಿ ನಗುನಗುತ್ತ ಹೋದೆಯಲ್ಲ !ನಿಮ್ಮಂಥ ಮಹಿಮಾವಂತರು ನಮ್ಮ ನಾಡಿನಲ್ಲಿ ಯಾರೂ ಇಲ್ಲ ! ತಾಯಿಯನ್ನು ನೆಪಮಾಡಿಕೊಂಡು ಇಂದ್ರಗಿರಿಯ ಶಿಖರವನ್ನು ಮೃದುಗೊಳಿಸಿದ ಮಹಾಪುರುಷ ! ಕಗ್ಗಲ್ಲಿನಲ್ಲೂ ದಿವ್ಯಧ್ವನಿಯನ್ನು ಎರಕೆಹೊಯ್ದು ಬಾಹುಬಲಿ ಮೂರ್ತಿಯನ್ನು ಮಾಡಿಸಿದ ಮಹಾನುಭವ

!ಮೂರ್ತಿಗಳಲ್ಲಿ ಬಾಹುಬಲಿಯೆಂತೋ ಭವ್ಯಾತ್ಮರಲ್ಲಿ ನೀನು ಅಂತೇ ಅನುಪಮ !ಕನ್ನಡನಾಡು ಅನಾಥವಾಯಿತು ! ಕನ್ನಡ ಕಾವ್ಯಪ್ರಪಂಚ ಅನಾಥವಾಯಿತು ! ಶಿಲ್ಪಲೋಕ ನಿರ್ಗತಿಕವಾಯಿತು ! ನಮ್ಮ ನಾಡಿನಲ್ಲಿ ಇನ್ನೇನು ಉಳಿದಿದೆ ? ಯಾವುದಕ್ಕಾಗಿ ನಾನು ಬದುಕಿರಬೇಕು ?" ಎಂದು ಚಿಂತಾಕ್ರಾಂತಳಾದಳು.

ಅತ್ತಿಮಬ್ಬೆಯಲ್ಲಿ ವೈರಾಗ್ಯ ಬಲಿಯಿತು. ಇದ್ದ ಹಣವನ್ನೆಲ್ಲ ದಾನ ಮಾಡಿದಳು. ಬರಿಗೈ ಆಯಿತು. ಇದ್ದ ಬದ್ದ ಮಹಿಮಾವಂತರೆಲ್ಲ ಕಣ್ಮುಚ್ಚಿದರು. ಈಕೆಯ ಲೋಭಕರ್ಮ ಎಂದೋ ಹಿಂಗಿ ಹೋಗಿತ್ತು.ಮೋಹಕರ್ಮವೂ ಅನಿವಾರ್ಯವಾಗಿ ಹಿಂಗಬೇಕಾಯಿತು.ವ್ರತನಿಯಮಗಳಿಂದ ದೇಹವನ್ನು ಒಣಗಿಸಿದಳು. ಹಗಲು ರಾತ್ರಿ ತಾನಯಿತು. ತಪವಾಯಿತು. ಕನಸಿನಲ್ಲೂ ಸಮವಸರಣವನ್ನು ರಚಿಸಿಕೊಂಡು ದಿವ್ಯಧ್ವನಿಯನ್ನಾಲಿ ಸುತ್ತ ಅತ್ತಿಮಬ್ಬೆ ಆತ್ಮಚಿಂತನೆ ಮಾಡಿದಳು. ಲೌಕಿಕದಿಂದ ಈಕೆ ಮುಕ್ತಳಾದರೂ ಲೋಕ ಈಕೆಯಿಂದ ಮುಕ್ತವಾಗಲಿಲ್ಲ. ದಿನ ಬೆಳಗಾದರೆ ಯಾರಾದರೂ ಬಂದು ಅದಕ್ಕೆ ಹಣಬೇಕು ಇದಕ್ಕೆ ಎಂದು ಈಕೆಯನ್ನು ಕಾಡದಿರುತ್ತಿರಲಿಲ್ಲ. ಹೆಲವೊಮ್ಮೆ ಅತ್ತಿಮಬ್ಬೆಯಲ್ಲಿ ಕಾಸಿಲ್ಲದಂತಾಗಿ ತನ್ನ ಸೊಸೆಯರಿಗೆ ಹೇಳಿ ಕೊಡಿಸಬೇಕಾಯಿತು. ಮಗನ ಕಿವಿಯ ಮೇಲೆ ಹಾಕಿ ದೀನದಲಿತರ ತಾಪತ್ರಯವನ್ನು ಹಿಂಗಿಸಬೇಕಾಯಿತು. ಅಣ್ಣಿಗ ದಿನಬೆಳಗಾದರೆ ತಾಯಮಡಿಲಲ್ಲಿ ಒಂದುನೂರು ಚಿನ್ನದ ನಾಣ್ಯಗಳನ್ನು ಹಾಕಿ ಅಡ್ಡಬಿದ್ದು ಮುಂದಿನ ಕಾರ್ಯಕ್ಕೆ ಹೊರೆಡುತ್ತಿದ್ದನು. ಅತ್ತಿಮಬ್ಬೆ ಅದರಲ್ಲಿ ತನ್ನ ಮೊಮ್ಮಕ್ಕಳಿಗೆ ಒಂದೊಂದು ನಾಣ್ಯ ಕೊಟ್ಟು. ಸೊಸೆಯರಿಗೆ ಹತ್ತು ಹತ್ತು ನಾಣ್ಯ ಕೊಟ್ಟು, ರನ್ನನ ಹೆಸರಿನಲ್ಲಿ ಹತ್ತು ನಾಣ್ಯ ಬಚ್ಚಿಟ್ಟು ಉಳಿದುದನ್ನು ದಾನಮಾಡುವಳು. ಹೀಗಿರುವಾಗ ಬಂಕಾಪುರದಿಂದ ಅಲ್ಲಿಯ ಆಶ್ರಮದ ಸಂಚಾಲಕರು ಬಂದರು.

"ಅಮ್ಮಾಜಿ , ಆಶ್ರಮ ತುಂಬ ಕಷ್ಟಕ್ಕೆ ಸಿಕ್ಕಿದೆ. ಘಿನ ಕಳೆದಂತೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. ವರಮಾನ ತಗ್ಗುತ್ತಿದೆ. ಕೊಡಲು. ಇನ್ನಾರಿದ್ದಾರೆ ? ರಾಷ್ಟ್ರಕೂಟರು ಹೋದುದು ನಮ್ಮ ಬೆನ್ನೆಲುಬು ಮುರಿದಂತಾಯಿತು ! ಚಾಮುಂಡರಾಯರೂ ಹೋದರು ! ಕಲ್ಪತರು ಕಾಳಲದೇವಿಯೂ ಇಲ್ಲವಾದರು ! ಗಂಗರು ವರ್ಷ ವರ್ಷವೂ ಕೊಡುತ್ತಿದ್ದುದನ್ನು ತಗ್ಗಿಸುತ್ತಿರುವರು ! ದಿಕ್ಕೇ

ತೋಚದಂತಾಗಿದೆ ! ಅಜಿತಸೇನಾ ಕೊಡುತ್ತಿದ್ದುದನ್ನು ತಗ್ಗಿಸುತ್ತಿರುವರು ! ದಿಕ್ಕೇ ತೋಚದಂತಾಗಿದೆ ! ಅಜಿತಸೇನಾಚಾರ್ಯರು ಸಾಯುವಾಗ "ಆಶ್ರಮಕ್ಕೆ ಅತ್ತಿಮಬ್ಬೆ ಇರುವ ತನಕ ಭಯವಿಲ್ಲ. ಎಂಥ ತಾಪತ್ರಯವಾದರೂ ದಾನಚಿಂತಾಮಣಿ ಕಿವಿಯಲ್ಲಿ ಒಂದು ಮಾತು ಹಾಕಿದರೆ ಎಷ್ಟು ಬೇಕಾದರೂ ಸಹಾಯ ಮಾಡುವರು .ಅತ್ತಿಮಬ್ಬೆ ಇರುವ ತನಕ ಯಾರೂ ಹೆದರಬೇಕಾದುದಿಲ್ಲ !" ಎಂದು ನಮಗೆ ಧೈರ್ಯ ಹೇಳಿ ಸಮಾಧಾನದಿಂದ ಸಮಾಧಿ ಮರಣ ಪಡೆದರು ! ನಾವು ಕೇಳುವವನ್ನೆಲ್ಲ ಕೇಳಿದೆವು. ಎಲ್ಲಿ ಹೋದರೂ ಏನಾದರೂ ಒಂದು ನೆಪ ಹೇಳುವರು. ಕೊನೆಗೆ ಅವರ ತಾಪತ್ರಯಗಳನ್ನೆಲ್ಲ ನಮ್ಮ ಎದೆ ಬಿರಿಯುವಂತೆ ಬಣ್ಣಿಸಿ ನಮ್ಮ ಕೈಲಿರುವುದನ್ನೂ ಅವರಿಗೇ ಕೊಟ್ಟುಬಿಡೋಣವೆಂದು ನಮ್ಮ ಮನಸ್ಸು ಕರಗುವಂತೆ ಮಾಡಿ ಸಾಗು ಹಾಕುವರು ! ಕೊನೆಯಲ್ಲಿ ತಮ್ಮಲ್ಲಿಗೆ ಬಂದಿಎರುವೆವು .ನೀವು ಮಾತುಕೊಟ್ಟರೆ ಸಾಲ ಸೋಲವನ್ನಾದರೂ  ಮಾಡಿ ನಡೆಸಿ ಕೊಂಡು ಹೋದೆವು. ಇಲ್ಲದಿದ್ದರೆ ಉಳಿದಿರುವ ಏಕೈಕ ಜೈನ ವಿಶ್ವ ವಿದ್ಯಾನಿಲಯವನ್ನು ಮುಚ್ಚಿಬಿಡುವೆವು. ಕನ್ನಡನಾಡಿನಲ್ಲಿ ಜೈನಾಸಮಾಜದಲ್ಲಿ ಉಳಿದಿರುವ ಮೂರ್ತಿಗಳು ಈಗ ಎರಡೇ ಎರಡು. ಒಂದು ತಾವು ಇನ್ನೊಂದು ಶ್ರವಣಬೆಳಗುಳದ ಗೊಮ್ಮಟಮೂರ್ತಿ !" ಎಂದು ಆಶ್ರಮದ ಸಂಚಾಲಕರು ಗೋಗರೆದರು !

ಅತ್ತಿಮಬ್ಬೆಗೆ ಇದನ್ನು ಕೇಳಿ ಬ್ರಹ್ಮಾಂಡಕ್ಕೇ ಬೇನೆ ಬಂದಂತಾಯಿತು. ತಾನೇಕೆ ದಾನಚಿಂತಾಮಣಿಯೆಂದು ಶಾಸನ ಹಾಕಿಸಿಕೊಂಡೆನೋ !ಎಲ್ಲರಂತೆ ಎಲೆಮರ ಕಾಯಾಗಿ ಬಾಳಿದ್ದರೆ ಈ ಸಂಕಟವೇ ಇರುತ್ತಿರಲಿಲ್ಲ !ಲೋಕದ ತಾಪತ್ರಯವನ್ನೆಲ್ಲ ನಾನೊಬ್ಬಳೆ ತೀರಿಸಬೇಕೆ ?ಜೈನ ಜಗುತ್ತು ಮುಳುಗಿ ಹೋಗಿದೆಯೇ ? ಆಳಿಗೊಂದು ಕೈ ಹಾಕಿದರೆ ಆಶ್ರಮವನ್ನು ಉಳಿಸಿಕೊಳ್ಳುವುದಾಕ್ಕಾಗುವುದಿಲ್ಲವೇ ?ಎಂಥ ಬಡತನವನ್ನು ಕಾಣಬೇಕಾಯಿತಪ್ಪ !ನನ್ನಲ್ಲಿ ನನ್ನದಾಗಿ ಒಂದು ಕುರುಡು ಕವಡೆಯೂ ಇಲ್ಲವಲ್ಲ !" ಎಂದು ಮಮ್ಮಲ ಮರುಗಿದಳು. ಸಂಚಾಲಕರು ಕಾಣುವಂತೆ ಈಕೆ ಕಂಬನಿ ಸುರಿಸಿದಳು. ಮೂಕಳಾಗಿ ಅತ್ತಳು.

"ಅಮ್ಮಾಜಿ ,ತಾವು ಅಳಬೇಕೆ ? ನಮ್ಮ ಆಶ್ರಮ ನಿಂತು ಹೋದರೂ ಚಿಂತೆಯಿಲ್ಲ ತಾವು ಮಾತ್ರ ಅಳಬಾರದು. ಅಜಿತಸೇನಾಚಾರ್ಯರು ಹೇಳಿ ಸತ್ತುದರಿಂದ ನಾನು ಬರಬೇಕಾಯಿತು. ತಾವು

ಕಂಬನಿ ಮಿಡಿದರೂ ಒಂದೇ ಗೊಮ್ಮಟ ಮಹಾಮೂರ್ತಿ ಶಿಥಿಲವಾದರೂ ಒಂದೇ ! ಈ ಎರಡರಲ್ಲಿ ಯಾವುದೊಂದನೂ ನಾವು ನೋಡಲಾರೆವು !" ಎಂದು ಸಂಚಾಲಕರು ಕಂಬನಿ ಮಿಡಿದರು.

"ಸಂಚಾಲಕರೆ, ನಾನು ಅಜಿತಸೇನಾಚರ್ಯರಿಗೆ ಮಾತುಕೊಟ್ಟಿದ್ದು ದಿಟ. ನನ್ನ ಪ್ರಾಣ ಹೋದರೂ ನಾನು ಕೊಟ್ಟು ಮಾತನ್ನು ಮಿರಲಾರೆ. ನಾನೇನು ದಾನ ಮಾಡ ಬೇಕೆ ? ಅಜಿತಸೇನಾಚಾರ್ಯರ ಪಾದಧೂಳಿಯನ್ನು ಒಂದು ಬಂಗಾರದ ಬರಣಿಯಲ್ಲಿ ಎತ್ತಿಟ್ಟುಕೊಂಡಿರುವೆನು. ಆ ಅಕ್ಷಯಪಾತ್ರೆ ನನ್ನ ಬಳಿ ಇರುವ ತನಕ ನನಗೆಲ್ಲಿಯ ಭಯ! ಖಂಡಿತ ಆಶ್ರಮ ನಿಲ್ಲಬಾರದು. ಏನೇ ಬರಲಿ ಅದು ಮುಂದುವರಿಯಲಿ . ಕಾಲಕ್ಕೆ ತಕ್ಕಂತೆ ನಾವು ಹೊಂದಿಕೊಳ್ಳಬೇಕು. ಬಂಕಾಪುರದ ಯೋಗ ಮುಗಿಯಿತು ! ಇನ್ನು ಆಶ್ರಮ ಅಲ್ಲಿರಬಾರದು. ಜೈನರ ಜೀವಂತ ಕಲ್ಪತರುವೆಂದರೆ ಭಾರತ ದೇಶಕ್ಕೆ ಶ್ರವಣಬೆಳಗುಳದ ಬಾಹುಬಲಿಯೊಂದೇ ! ನಮ್ಮ ವಿಶ್ವವಿದ್ಯಾನಿಲಯವನ್ನು ಸ್ಥಳಾಂ ತರಗೋಳಿಸೋಣ ! ಇನ್ನುಮುಂದೆ ಗೊಮ್ಮಟ ವಿಶ್ವವಿದ್ಯಾನಿಲಯವನ್ನು ಸ್ಥಳಾಂ ತರಗೊಳಿಸೋಣ !ಇನ್ನುಮುಂದೆ ಗೊಮ್ಮಟ ವಿಶ್ವವಿದ್ಯಾನಿಲಯವೆಂದು ಶ್ರವಣ ಬೆಳಗುಳದಲ್ಲಿ ಈ ವಿದ್ಯಾಸಂಸ್ಥೆ ನಡೆಯಲಿ. ಪಂಪಕವಿ ಓದಿದ ವಿಶ್ವವಿದ್ಯಾನಿಲಯ ಮುಳುಗಿ ಹೋಗಬೇಕೆ ? ಚಾಮುಂಡರಾಯನನ್ನು ತಿದ್ದಿ ಒಂದು ರೂಪಕ್ಕೆ ತಂದ ವಿಶ್ವವಿದ್ಯಾಲಯ ನಿಂತುಹೋಗಬೇಕೆ ?ಬೇಡ. ಕಷ್ಟಬರುತ್ತೆ. ಕಂಗೆಡಬಾರದು. ಶ್ರವಣಬೆಳುಗುಳಕ್ಕೆ ಭಂಡಾರವನ್ನು ಸಾಗಿಸಿ ಬಿಡಿ. ಇನ್ನು ಮುಂದೆ ಗೊಮ್ಮಟ ವಿಶ್ವ ವಿದ್ಯಾನಿಲಯ ಸ್ಥಾಪಿತವಾಗಲಿ !" ಎಂದು ಹೇಳಿ ಅತ್ತಿಮಬ್ಬೆ ಒಳಗೆಹೋದಳು. ತನ್ನ ಸೊಸೆಯರ ಮುಂದೆ ! ಗೊಮ್ಮಟ ವಿಶ್ವವಿದ್ಯಾನಿಲಯಕ್ಕಾಗಿ ಸಹಾಯಮಾಡಬೇಕೆಂದು ಕೈಯೊಡ್ಡಿ ಬೇಡಿದಳು !

"ಅತ್ತೆ, ನಮ್ಮ ಸಂಪತ್ತಲ್ಲ ತಾವು ಕೊಟ್ಟುದೇ ಆಗಿದೆ. ಹೊರಲಾರದಷ್ಟು ಬಂಗಾರವನ್ನು ನಮ್ಮ ಮೇಲೆ ಹೊರಿಸಿರುವಿರಿ. ವಿಶ್ವವಿದ್ಯಾನಿಲಯಕ್ಕೆ ನಮ್ಮಿಬ್ಬರ ಬಂಗಾರವನ್ನೂ ದಾನವಾಗಿ ತಮ್ಮ ಹೆಸರಿನಲ್ಲೇ ಕೊಡುವೆವು. ನಮಗೆ ಮಂಗಳಸೂತ್ರ ಮತ್ತು ಓಲೆ ಎರಡನ್ನೂ ಬಿಟ್ಟುಬಿಡಿ. ಉಳಿದೆಲ್ಲ ಆಭರಣವನ್ನೂ ಗೊಮ್ಮಟ ವಿಶ್ವವಿದ್ಯಾನಿಲಯಕ್ಕೇನೆ ದಾನಮಾಡಿಬಿಡಿ. ಯಾರಿಗೆ ಬೇಕು. ಈ ಬಂಗಾರ !ಎಷ್ಟು ದಿನ ಇದನ್ನು ಹಾಕಿಕೊಂಡರೂ ನಮ್ಮ ತೊಗಲೇನೂ ಬಂಗಾರವಗುವುದಿಲ್ಲ !" ಎಂದು

ಸೀತಲ ಮತ್ತು ವಿಮಲ ಇಬ್ಬರೂ ತಮ್ಮ ಆಭರಣರಾಶಿಯನ್ನು ತಂದು ಸಂಚಾಕರ ಮುಂದೆ ಸುರಿದರು ! ಚೊಕ್ಕ ಬಂಗಾರದ ಮೇಲೆ ಜಾತಿರತ್ನಗಳು ಧ್ರುವತಾರೆಗಳಂತೆ ಕೋರೈಸಿದವು !

"ಸಂಚಾಲಕರೆ ,ಈ ಆಭರಣಗಳನ್ನು ಸದ್ಯದ ಖರ್ಚಿಗೆ ವಿನಿಯೋಗಮಾಡಿಕೊಳ್ಳಿ. ಮುಂದೆ ನೋಡುವ, ಶ್ರವಣಬೆಳಗುಳದಲ್ಲಿ ವಿಶ್ವವಿದ್ಯಾನಿಲಯ ಸ್ಥಾಪಿತವಾದರೆ ಎಷ್ಟೋ ಜನ ಪುಣ್ಯಾತ್ಮರು ಅಲ್ಲಿಗೆ ಬಂದು ಹೋಗುವರು. ನೂರಕ್ಕೆ ಬಬರಾದರೂ ಏನಾದರೂ ಕೊಟ್ಟೇ ಕೊಡುವರು !" ಎಂದು ಅತ್ತಿಮಬ್ಬೆ ಸಂಚಾಲಕರನ್ನು ಬೇಳ್ಕೊಟ್ಟಳು.

ಆಸನ್ನಭವ್ಯೆಯಂ ಜನ
ಶಾಸನದೀಪಿಕೆಯುಮೆನಿಸಿ ಮಣಿಕನಕಮಯೋ
ದ್ಭಾಸಿ ಜಿನಪ್ರತಿಮೆಗಳಂ
ಸಾಸಿರದಯ್ನೂರನಳ್ತಿಯಿಂ ಮಾಡಿಸಿದಳ್